# CULTURAL HERITAGE OF KARNATAKA


## NATIONAL SEMINAR

Sponsored by :
**Department Of Heritage and Museum Mysore**

# PROCEEDING

Organized Department Of History :

**V.M.K.S.R. Vastrad Arts, Science &**
**V. S. Bellihal Commerce, College, Hungund**



**Prof. S. R. Nagannavar**
Editor

**Prof. (Smt) S. K. Math**
Cheif Editor & Principal

Scanned with OKEN Scanner

**Published by**
V.M.V.V.Sangha's
V.M.S.R.Vastrad Arts, Science &
V.S.Bellihal Commerce College, Hungund

**Editor**
Prof. S.R.Nagannavar
Assistant Professor
Department of History
V.M.S.R.Vastrad Arts, Science &
V.S.Bellihal Commerce College, Hungund

**Publisher**
Manasollas Publication, Hungund

Date : 22th Febuary, 2020

ISBN-978-93-5396-161-9

Rs : 120/-

The publication of the proceedings was financially supported by UGC and the responsibility for the facts stated, opinions expressed and conclusions reached is entirely that of author / authors of the articles. V.M.KS.R.Vastrad Arts, Science & V.S.Bellihal Commerce College, Hungund accepts no responsibility.

Printed at :
Mallikarjun Graphics
Main Bazar Opp. Maruti Temple, Hungund-587 118
Tel. : 9945196601

Scanned with OKEN Scanner

Title- Artsof Animal Communication Exhibition and Heritage
- Dr. Thippeswamy D.S.

# ಪ್ರಾಣಿ ಸಂವಹನ ಪ್ರದರ್ಶನ ಕಲೆಗಳು ಮತ್ತು ಪರಂಪರೆ

ಡಾ. ತಿಪ್ಪೇಸ್ವಾಮಿ ಡಿ.ಎಸ್
ಸಹಾಯಕ ಪ್ರಾಧ್ಯಾಪಕರು
ವಿ.ಎಂ. ಪದವಿ ಮಹಾವಿದ್ಯಾಲಯ, ಹುನಗುಂದ
ಮೊ. 7676658265

ಪ್ರಾಣಿ ಸಮುದಾಯದಿಂದ ಮನುಷ್ಯನನ್ನು ಬೇರ್ಪಡಿಸಿರುವುದು ಅವನ ಸಂಸ್ಕೃತಿ. ಸಂಸ್ಕೃತಿ ಇಲ್ಲದಿದ್ದರೆ ಪ್ರಾಣಿಗೂ ಮನುಷ್ಯನಿಗೂ ವ್ಯತ್ಯಾಸ ಇರುವುದಿಲ್ಲ. ಕಲೆ, ಧರ್ಮ, ವಿಜ್ಞಾನಿಗಳು ಸಂಸ್ಕೃತಿಯ ಮುಖ್ಯ ಅಂಗಗಳು. ಇವು ಸಂಪೂರ್ಣವಾಗಿ ಮನುಷ್ಯನ ಅವಿಷ್ಕಾರ ಇವು ಇಲ್ಲದಿದ್ದರೆ ಮನುಷ್ಯನ ಬಾಳನ್ನು ಕಲ್ಪಿಸಿಕೊಳ್ಳುವುದಕ್ಕೂ ಆಗುವುದಿಲ್ಲ. ಮನುಷ್ಯ ಕಲ್ಪಿಸಿಕೊಂಡ ದೈವಾರಾಧನೆಯ ಜೊತೆಯಲ್ಲಿ ಹಾಡು, ಕುಣಿತ, ಶಿಲ್ಪಿ, ಚಿತ್ರ ಮೊದಲಾದ ಕಲೆಗಳು ಪರಂಪರೆಯಿಂದ ಬಂದಿವೆ.

ಪ್ರಾಣಿ ಸಂವಹನ ಪ್ರದರ್ಶನ ಕಲೆಗಳು ಮನುಷ್ಯನಷ್ಟೇ ಪ್ರಾಚೀನವಾದವು. ಪ್ರಕೃತಿ, ಪರಿಸರದ ಪರಿವೀಕ್ಷಣೆಯಿಂದ, ಅನುಕರಣೆಯಿಂದ ಅರಿತದ್ದನ್ನು ಒಂದೆಡೆ ದಾಖಲಿಸಿಬೇಕೆಂಬ ಮನುಷ್ಯ ಸಹಜ ಗುಣದಿಂದ ಇಂಥ ಕಲೆಗಳು ಅಸ್ತಿತ್ವಕ್ಕೆ ಬರುತ್ತವೆ. ಇವು ಮನುಷ್ಯನಿಗೆ ನೆಮ್ಮದಿ, ಸಂತೋಷ ನೀಡುವುದಲ್ಲದೆ, ಮುಂದಿನ ಪೀಳಿಗೆಗೆ ಅನುಕರಣೆಯ, ಅನುಕರಣೆಯ ಆಕಾರಗಳಾಗುತ್ತವೆ. ಜನಪದ ಸಂಸ್ಕೃತಿಯ ಪ್ರತಿ ಹೆಜ್ಜೆಯಲ್ಲೂ ಜನಪದ ಕಲೆಗಳನ್ನು ಕಾಣಬಹುದು. ಜನಪದರ ಬದುಕೇ ಒಂದು ಕಲೆ. ಆ ಮುಗ್ಧ ಜನರಿಗೆ ತಿಳಿದೋ ತಿಳಿಯದೆಯೋ ಅವರ ಬದುಕಿನಲ್ಲಿ ಕಲೆ ಹಾಸುಹೊಕ್ಕಾಗಿದೆ. ಜನಪದ ಸಾಹಿತ್ಯ, ಸಂಗೀತವೂ ಕಲೆಯ ಅಂಗವೇ ಆಗಿವೆ. ಜನಪದವು ಸಾಹಿತ್ಯದ ಸೃಷ್ಟಿಯಲ್ಲಿ ಜನಪದ ಹಾಡಿನ ದಾಟಿಯಲ್ಲಿ ಜನಪದ ಅಂಶ ಅಡಗಿರುವುದನ್ನು ಕಾಣಬಹುದು. ಬುಡಕಟ್ಟು ಜನಾಂಗಗಳಲ್ಲಿ ವ್ಯವಸ್ಥಿತವಾಗಿ ಹಾಡುವುದಲ್ಲದೆ ಸಂಗೀತವೇ ಆಗುತ್ತದೆ. ಅಂದರೆ ಮನುಷ್ಯನ ನೆಮ್ಮದಿಯನ್ನು ಹುಟ್ಟಿಸುವುದಂತಹದ್ದು ಸಂಗೀತ, ಮನುಷ್ಯನ ಬದುಕಿನಲ್ಲಿ ಕಲೆಗಳು ಪರಂಪರೆಯಿಂದ ಬೆಳೆದುಬಂದಿವೆ. ತಾನು ಕುಣಿಯುವುದರ ಜೊತೆಗೆ ತನ್ನವರನ್ನು ಕುಣಿಸಿ, ನಗಿಸಿ, ತನ್ನ ಸಂತೋಷಕ್ಕಾಗಿ ಪ್ರಾಣಿ ಪಕ್ಷಿಗಳನ್ನು ತನ್ನ ಬುದ್ದಿ ಮತ್ತೆಗೆ ಸರಿದೂಗುವಂತೆ ಪಳಗಿಸಿ

Scanned with OKEN Scanner

ಅವುಗಳನ್ನು ತನ್ನ ಕಲಾತ್ಮಕ ಬದುಕಿಗೆ ಬಳಸಿಕೊಂಡಿರುವುದನ್ನು ಕವಲೆತ್ತಿನವರು, ಕರಡಿ ಕುಣಿತ ಹಾಗೂ ಹಾವಾಡಿಗರಲ್ಲಿ ನೋಡಬಹುದಾಗಿದೆ.

1) ಕವಲೆತ್ತಿನವರು
2) ಕರಡಿಕುಣಿತ
3) ಹಾವಾಡಿಗರು

ಜನಪದರಿಗೆ ಪ್ರಧಾನವಾಗಿ ಮನರಂಜನೆ ಒದಗಿಸುವ ಹಿನ್ನೆಲೆಯಲ್ಲಿ ಪ್ರಾಣಿಗಳನ್ನು ಪಳಗಿಸಿ ಕಲಾಭ್ಯಾಸದಲ್ಲಿ ತರಬೇತಿಗೊಳಿಸಿ ಕಲೆಯನ್ನು ಪ್ರದರ್ಶನ ಮಾಡುವ ಕಲೆಗಳಲ್ಲಿ ಕವಲೆತ್ತಿನಾಟವು ಬಹು ಪ್ರಸಿದ್ಧವಾಗಿದೆ. ಈ ಕಲಾ ಪ್ರದರ್ಶನ ಮಾಡುವವರನ್ನು ಕವಲೆತ್ತಿನವರು, ಗಂಗೆತ್ತಿನವರು, ಬಸವಣ್ಣನಾಡಿನವರು, ಎಂದು ಕರೆಯುವ ವಾಡಿಕೆ ಹಲವು ಕಡೆಗಿದೆ. ಈ ಕಲೆಯು ಮೊದಲಿಗೆ ಮನರಂಜನೆ ಮತ್ತು ಹವ್ಯಾಸದ ಪಂಕ್ತಿಯಲ್ಲಿ ಬೆಳೆದುಕೊಂಡು ಬಂದರೂ ಇಂದಿನ ದಿನಗಳಲ್ಲಿ ವ್ಯಕ್ತಿ ಕಲೆಯಾಗಿ ಬೆಳೆದುಬಂದಿದೆ.

ಮಾನವ ಪ್ರಾಸಕ್ತನ ಕಾಲದಿಂದಲೂ ತನ್ನ ಸುತ್ತಲಿನ ಕಾಡು ಪ್ರಾಣಿಗಳೊಂದಿಗೆ ಬೆಳೆದು ಬಂದಿದ್ದರಿಂದ ಎತ್ತು ಮತ್ತು ಹಸುವನ್ನು ಪಳಗಿಸಿ ಅವುಗಲಿಗೆ ತಲಾ ಒಂದೊಂದು ಹೆಸರುಗಳನ್ನಿಟ್ಟು ಆ ಹೆಸರುಗಳ ಮೂಲಕವೇ ಕಲಾ ಪ್ರದರ್ಶನದ ವೇಳೆಯಲ್ಲಿ ಕರೆಯಲಾಗುತ್ತದೆ. ಆಯಾ ಹೆಸರಿನ ಪ್ರಾಣಿಗಳೆರಡೂ ಸೂತ್ರದಾರನ ಸಂಜ್ಞೆಗೆ ತಕ್ಕಂತೆ ಅಭಿನಯಿಸುವ ಕಲಾಭಿನಯ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಈ ಕವಲೆತ್ತಿನವರ ಮೂಲ ವೃತ್ತಿ ವ್ಯವಸಾಯವಾಗಿದ್ದು ಇವರ ಪ್ರವೃತ್ತಿಯು ಕವಲೆತ್ತಿನ ಪ್ರದರ್ಶನ ಕಲೆಯಾಗಿದೆ. ಇವರು ಅರೆ ಅಲೆಮಾರಿಗಳು, ಮಳೆಗಾಲದಲ್ಲಿ ವ್ಯವಸಾಯ ವೃತ್ತಿಯನ್ನು ಕೈಗೊಂಡು ಬೇಸಿಗೆಯಲ್ಲಿ ಈ ಕವಲೆತ್ತಿನ ಆಟ ಪ್ರದರ್ಶಿಸುತ್ತಾ ಊರುರೂ ಅಲೆಯುತ್ತಿರುತ್ತಾರೆ.

ಈ ಕೋಲೆಬಸವ ಪದ ನಿಷ್ಪತ್ತಿಯನ್ನು, ಕಪಿಲೆ, ಬಸವ, ಕವಲೆಬಸವ, ಕೌಲೆ ಬಸವ ಎಂದು ವಿದ್ವಾಂಸರು ಸೂಚಿಸಿರುವುದು ಸಮಂಜಸವೇ ಆಗಿದ್ದು 'ಕಪಿಲ' ಎಂದರೆ ಹೆಣ್ಣು ಹಸು, 'ಬಸವ' ಎಂದರೆ ಗಂಡು ಎತ್ತು ಇವೆರಡನ್ನು ಸೇರಿಸಿ ತರಬೇತಿ ಕೊಟ್ಟು ಆಡಿಸುವ ಆಟವೇ ಕೋಲೆ ಬಸವನಾಟವಾಗಿದೆ. ಈ ಪ್ರದರ್ಶನ ಕಲಾವಿದರು, ಗೊಲ್ಲ ಜನಾಂಗಕ್ಕೆ ಸೇರಿದವರು. ಈ ಗೊಲ್ಲರನ್ನು ಪೆದ್ದಟ್ಟಿ ಗೊಲ್ಲರು ಎಂದು ಕರೆಯುವರು. ಇವರು ತಮ್ಮ ಆರಾಧ್ಯ ದೈವನಾದ ಜುಂಜಪ್ಪನೇ ಬಸವನ ರೂಪವನ್ನು ತಾಳಿದವನೆಂದು ನಂಬಿಕೆಯನ್ನು ಇರಿಸಿಕೊಂಡವರು.

ಪ್ರಾಣಿಗಳನ್ನು ಬಳಸುವಲ್ಲಿ ದೊಡ್ಡದಾದ ಬಸವ ರಾಮನಾದರೆ ಇದಕ್ಕಿಂತ ಸ್ವಲ್ಪ ಚಿಕ್ಕ ಹಸು ಲಕ್ಷ್ಮಣನಾಗುತ್ತದೆ. ಮತ್ತೊಂದು ಹಸುವು ಸೀತೆಯಾಗಿರುತ್ತದೆ. ಈ ಪ್ರಾಣಿಗಳು ಸಾಮಾನ್ಯವಾಗಿ ಹಳ್ಳಿಗಳಲ್ಲಿ ದೇವರ ಹೆಸರಿನಲ್ಲಿ ಹರಕೆ ಹೊತ್ತು ಮೀಸಲು ಪ್ರಾಣಿಗಳಾಗಿರುತ್ತವೆ. ಇಂದಿನ ದಿನಗಳಲ್ಲಿಯೂ ಸಹ ಹಳ್ಳಿಗಳಲ್ಲಿ ಇಂತಹ ದೇವರ ಹೆಸರಿನ ಮೀಸಲು ಪ್ರಾಣಿಗಳನ್ನು ನೋಡಬಹುದು. ಗ್ರಾಮೀಣರು ನಂಬುವ ಮೂಢನಂಬಿಕೆಯನ್ನು ನಂಬಿಕೊಂಡು ಬದುಕುವರು. ಇಂತಹ ಪ್ರಾಣಿಗಳನ್ನು ದೈವತ್ವದ

Scanned with OKEN Scanner

ಪ್ರಾಣಿಗಳೆಂದು ನಂಬಿ ಅವುಗಳನ್ನು ಕವಲೆತ್ತಿನವರಿಗೆ ದಾನ ನೀಡುತ್ತಾರೆ. ಈ ಪ್ರಾಣಿಗಳನ್ನು ಇವರು ತಮಗೆ ಬೇಕಾದಂತೆ ಪಳಗಿಸಿ ತರಬೇತಿ ಕೊಟ್ಟು ಬಸವನಾಟಕ್ಕೆ ಅಣಿಗೊಳಿಸುತ್ತಾರೆ.

**ವೇಷಭೂಷಣಗಳು :–**

ಇವರು ಪ್ರದರ್ಶನ ಕಲೆಗಳಲ್ಲಿ ಮುಖ್ಯವಾಗಿ ಸೂತ್ರದಾರ (ಯಜಮಾನ) ಬಿಳಿಯ ಕಚ್ಚೆಪಂಜೆ, ಅಂಗಿ, ಮೇಲೊಂದು ಕೋಟು, ತಲೆಗೊಂದು ರುಂಬಾಲು, ಹೆಗಲಿಗೆ ಶಾಲು, ಹಣೆಯಲ್ಲಿ ಕುಂಕುಮ ಮತ್ತು ವಿಭೂತಿಯನ್ನು ದರಿಸಿರುತ್ತಾನೆ. ಈತನ ಸಹಾಯಕ್ಕಾಗಿ ಬರುವ ಇತರರು ಸಹ ತಕ್ಕ ಮಟ್ಟಿಗೆ ಇವೇ ವೇಷವನ್ನು ಧರಿಸಿರುತ್ತಾರೆ. ಇನ್ನೂ ಪ್ರಾಣಿಗಳ ಅದರಲ್ಲಿಯೂ ಬಸವನ ಕೋಡುಗಳಿಗೆ ರಂಗು ರಂಗಾದ ಬಟ್ಟೆಗಳನ್ನು ಸುತ್ತಿ ಹಣೆಗೆ ರಾಮ, ಆಂಜನೆಯ ಚಿತ್ರವುಳ್ಳ ಹಿತ್ತಾಳೆಯ ತಗಡನ್ನು ಕಟ್ಟಿರುತ್ತಾರೆ. ಬೆನ್ನಿಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಬಹು ವಿನ್ಯಾಸಗಳಿಂದ ತೂಗುಬಿಟ್ಟಿರುತ್ತಾರೆ. ಸೀತೆ ಪಾತ್ರ ವಹಿಸುವ ಹಸುವಿನ ಹಣೆಗೆ ಕುಂಕುಮ, ಬೆನ್ನಿಗೆ ಹಲವಾರು ಬಣ್ಣದ ಸೀರೆಗಳನ್ನು ತೂಗು ಬಿಟ್ಟಿರುತ್ತಾರೆ. ಲಕ್ಷ್ಮಣ ಪಾತ್ರ ನಿರ್ವಹಿಸುವ ಚಿಕ್ಕ ಬಸವನಿಗೂ ಹಲವು ಬಟ್ಟೆಗಳನ್ನು ತೂಗು ಬಿಟ್ಟಿರುತ್ತಾರೆ. ಇವು ಕೋಲೆಬಸವ ಮತ್ತು ಅವುಗಳ ಯಜಮಾನ ವೇಷಭೂಷಣಗಳಾಗಿವೆ.

**ಕಲಾಪ್ರದರ್ಶನ :**

ಊರ ಹೊರ ವಲಯದಲ್ಲಿ ಶಾಲೆ, ಬಯಲು ಸ್ಥಳ ಇಲ್ಲವೆ ಸಮಾಜ ಮಂದಿರಗಳೇ ಇರುವ ಇಳಿದುಕೊಳ್ಳುವ ತಾತ್ಕಾಲಿಕ ಸ್ಥಳ. ಶಾಲೆ, ಮಂದಿರಗಳು ದೊರೆಯದೇ ಹೋದಲ್ಲಿ ತಮ್ಮದೇ ಆದ ಡೇರೆಯೊಂದನ್ನು ಹೊಡೆಯುತ್ತಾರೆ. ಈ ಆಟಗಳಲ್ಲಿ ಮುಖ್ಯವಾಗಿ ರಾಮಾಯಣ ಕಥೆಯಲ್ಲಿನ ರಾಮ ಸೀತೆಯರ ವಿವಾಹದ ಪ್ರಸಂಗವೇ ಹೆಚ್ಚು ಪ್ರದರ್ಶನಗಳ್ಳುವುದು ವಾಡಿಕೆಯಾಗಿದೆ. ವಿವಾಹದ ಸನ್ನಿವೇಷಕ್ಕೆ ಮೊದಲಿಗೆ ರಾಮ–ಸೀತೆಯ ಪಾತ್ರಗಳ ಪ್ರಾಣಿಗಳು ಪ್ರತ್ಯೇಕವಾಗಿ ಒಂದೊಂದು ಕಡೆ ನಿಂತಿರುತ್ತವೆ. ಸೀತೆಯ ಯಜಮಾನಿಕೆಯ ಪಾತ್ರವನ್ನು ವಹಿಸಿಕೊಂಡಿರುವನು. ಸೀತೆಯನ್ನು ಉದ್ದೇಶಿಸಿ, ನೋಡು ಸೀತಮ್ಮ ರಾಮದೇವರು ನಿನ್ನ ರೂಪಕ್ಕೆ, ಗುಣಕ್ಕೆ ಮನಸೋತು ಮದುವೆಯಾಗಿ ನಂತರ ಕೇಳುತ್ತಾರೆ. ಅವರು ಮನ್ಮಥನನ್ನು ಮೀರಿಸುವಂತಿದ್ದಾರೆ. ಅವರನ್ನು ಮದುವೆಯಾಗುತ್ತಿಯಮ್ಮಾ ಎಂದು ಕೇಳುತ್ತಾರೆ. ಆಗ ಸೀತೆಯಿಲ್ಲವೆಂದು ತಲೆಯಾಡಿಸಿ ತನ್ನ ಅಸಮ್ಮತಿಯನ್ನು ಸೂಚಿಸುತ್ತದೆ. ಆಗ ಅದರ ಯಜಮಾನ ನೋಡು ಸೀತಮ್ಮ ನಿನಗೆ ಮುತ್ತಿನೋಲೆ, ಚಿನ್ನದ ಡಾಬು, ಉಂಗುರ ಮತ್ತು ಸೀರೆ ಕೊಡಿಸುತ್ತಾರಂತೆ ರಾಮದೇವರು ಎಂದು ಒಡವೆ ಮತ್ತು ಬಟ್ಟೆಗಳ ಪಟ್ಟಿಯನ್ನು ಹೇಳುತ್ತಾ ಮತ್ತು ಸೀತೆ ಒಪ್ಪಿಗೆ ಹೇಳಿದಾಗ ಸೀತೆಯು ಆಗಲಿ ಎಂಬುವಂತೆ ಸೂಚಿಸುವ ಪ್ರಸಂಗವನ್ನು ಕಾಣುತ್ತೇವೆ.

ಕೌಲೆತ್ತಿನ ಆಟದಲ್ಲಿ ಬಳಕೆಯಾಗುವ ವಾದ್ಯ ಪರಿಕರಗಳೆಂದರೆ ಸನಾದಿ, ಶೃತಿ, ಡೋಲಕ ಇವು ಪ್ರಧಾನ ವಾಧ್ಯಗಳು. ಆಟದ ಆರಂಭ ಮತ್ತು ಕೊನೆಗೆ ಅತ್ಯಂತ

ರಭಸವಾದ ವಾದ್ಯ ಸ್ಥಳ ಕೇಳಿಬರುತ್ತವೆ. ಸಂಭಾಷಣೆಯ ಮಧ್ಯೆ ಚುರುಕಾಗಿ ವಾದ್ಯ ನುಡಿಸುವುದು ಉಂಟು. ಇವರ ಆಟದಲ್ಲಿ ಕುಟುಂಬದ ಮಹಿಳೆಯರೊಬ್ಬರು ಭಾಗವಹಿಸಿರುವುದು ವಿಚಿತ್ರ, ಕಾರಣ ಕೇಳಿದರೆ ಹೆಣ್ಣುಮಕ್ಕಳಿಗೆಲ್ಲಾ ಅದೇಕೆ ಎನ್ನುತ್ತಾರೆ. ಅವರು ಮನೆಯಲ್ಲಿ ಚಾಪೆ ಹೆಣೆಯುವ, ದನ-ಕರ ಕಾಯುವ ಮುಂತಾದ ಕೆಲಸದಲ್ಲಿ ತೊಡಗಿರುತ್ತಾರೆ.

ಇವರ ಪ್ರದರ್ಶನ ಕಲೆ ಕಂಡು ದಾನಿಗಳು ಕೊಟ್ಟ ಹಳೆಯ ಬಟ್ಟೆಗಳೇ ಉಡುಗೆ ತೊಡುಗೆಗಳು. ಕಾಳು, ಕಡಿ, ಅಲ್ಪ ಹಣವೆ ಬದುಕಿಗೆ ಆಧಾರ. ಇವರು ತಲಾ ತಲಾಂತರವಾಗಿ ಇದೇ ವೃತ್ತಿಯಲ್ಲಿ ಇನ್ನೂ ಮುಂದುವರೆಸುವುದು ಕಂಡುಬರುತ್ತದೆ. ಅಕ್ಷರ ಲೋಕದ ಗಂದವೇ ಇಲ್ಲದ ಗೋಳಾಟದ ತರುಣ ಬದುಕು ಕವಲೆತ್ತಿನವರದಾಗಿದೆ.

**ಕರಡಿಕುಣಿತ :**

ಪ್ರಾಣಿಗಳನ್ನು ಬಳಸಿಕೊಂಡು ಉಪಜೀವನವನ್ನು ನಡೆಸುವವರಲ್ಲಿ ಈ ಕರಡಿಯನ್ನು ಕುಣಿಸುವವರೂ ಒಬ್ಬರಾಗಿರುದ್ದಾರೆ. ಈ ಕರಡಿ ಕುಣಿತವು ಜನಪದ ಪ್ರದರ್ಶನ ಕಲೆಗಳಲ್ಲಿಯೂ ಒಂದಾಗಿದೆ. ಇಲ್ಲಿ ವಿಶೇಷವಾದುದ್ದೇನೂ ಇರದಿದ್ದರೂ ಜೀವಂತ ಕರಡಿಯೊಂದೇ ಜನಪದರನ್ನು ಚಕಿತಗೊಳಿಸುವ ಕೇಂದ್ರ ಬಿಂದು. ಕರಡಿ ನೋಡುವುದೇ ಒಂದು ವಿಶೇಷವಾದರೆ ಅದು ಅಭಿನಯಿಸುವ ಕಲೆಯು ಅಷ್ಟೇ ಕುತೂಹಲಕರವಾದದ್ದು. ಇದರಿಂದಾಗಿಯೇ ಕರಡಿ ಕುಣಿತ ಪ್ರಚಲಿತದಲ್ಲಿದೆ. ಕೋಲೆ ಬಸವನಾಟದವರು ಸಾಕು ಪ್ರಾಣಿಗಳನ್ನು ಬಳಸಿಕೊಂಡು ತರಬೇತಿಗೊಳಿಸಿ ಆಟಕ್ಕೆ ಸಿದ್ಧಗೊಳಿಸುವುದಕ್ಕಿಂತ ಪ್ರಾಣಿ ಅದರಲ್ಲೂ ಕ್ರೂರವಾದ ಕರಡಿಯನ್ನು ಪಳಗಿಸಿ ತರಬೇತಿಗೊಳಿಸಿ ಆಟಕ್ಕೆ ಅಣಿಗೊಳಿಸಿಕೊಳ್ಳುವುದು ಅದಮ್ಯ ಸಾಹಸವೇ ಸರಿ.

ಕರಡಿಯು ದೈತ್ಯ ಶಕ್ತಿಯನ್ನು ಮೈಗೂಡಿಸಿಕೊಂಡು ಪ್ರಾಣಿಯಾಗಿದ್ದು ಮಾನವ ತನ್ನ ಬುದ್ಧಿಮತ್ತೆಯಿಂದ ಅದನ್ನು ತನ್ನ ವಶದಲ್ಲಿರಿಸಿಕೊಂಡು ಕುಣಿಸುತ್ತಾನೆ. ಹಾಡಿನ ತಾಳಕ್ಕೆ ತಕ್ಕಂತೆ ಕರಡಿ ಕುಣಿಯುವುದು ಮನ ಮೋಹಕವಾದದ್ದು. ಮನೆಯಲ್ಲಿ ರಾತ್ರಿ ಮಕ್ಕಳು ಏನಾದರೂ ಬೇಡಿ ಹಠಮಾಡಿ ಅಳುತ್ತಿರುವಾಗ 'ಕರಡಿ' ಬಂತು ಕರಡಿ ಕರೆಯುತ್ತಾನೆ ನೋಡು, ಅಲ್ಲಿ ಕರಡಿ ಇದೆ ಹೀಗೆ ಕರಡಿ ಹೆದರಿಕೆಯನ್ನು ಹಚ್ಚಿ ಮಕ್ಕಳನ್ನು ರಮಿಸುವುದರ ಮೂಲಕ ಹೆದರಿಸಿ ಸುಮ್ಮನಿರಿಸುವ ತಾಯಂದಿರನ್ನು ಗ್ರಾಮೀಣ ಪ್ರದೇಶಗಳಲ್ಲಿ ನಾವು ಕಾಣಬಹುದು. ಹೀಗೆ ಕರಡಿಯಿಂದ ಮಕ್ಕಳಿಗೆ ಹೆದರಿಸುವುದರಿಂದ ಹಿಡಿದು ಉಪಮೆಯನ್ನು ಹಚ್ಚಿ ಇತರರಿಗೆ ಬೈಯ್ಯುವುದರ ಮೂಲಕ ಕರಡಿ ಇದ್ದಂಗಿದ್ದಾನೆ. ಕರಡಿ ಮಾಡಿದಂಗೆ ಮಾಡ್ತಾನೆ. ತನ್ನ ಅಭಿನಯದ ಮೂಲಕ ಜನರಿಗೆ ರಸದೌತಣವನ್ನು ನೀಡುವವರೆಗೂ ಕರಡಿಯ ಹೆಸರು ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಬಂದಿದೆ.

ಕರಡಿ ಪ್ರದರ್ಶನ ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಕುತುಹಲ ಮೂಡಿಸುಫ ಪ್ರಾಣಿಯಾಗಿದ್ದು ದೊಡ್ಡ ಸರ್ಕಸ್ ಕಂಪನಿಗಳಲ್ಲಿಯೂ ಸಹ ತನ್ನ

ಇರುವಿಕೆಯನ್ನ ಕಾಯ್ದುಕೊಂಡು ಬಂದಿದೆ. ಜೊತೆಗೆ ಆನೆ, ಹುಲಿ, ಚಿರತೆ, ಸಿಂಹ ಮೊದಲಾದ ಕಾಡು ಪ್ರಾಣಿಗಳೂ ಸಹ ಬಗೆ ಬಗೆಯ ಆಟಗಳಿದ್ದು ತಮ್ಮ ಅಭಿನಯವನ್ನು ನೀಡಿ ಜನಮನವನ್ನು ರಂಜಿಸುತ್ತವೆ. ಕರಡಿಯು ಸೈಕಲ್, ಕಾರು ನಡೆಸುವುದನ್ನು ನಾವು ಸರ್ಕಸ್ ಕಂಪನಿಯು ಆಟಗಳಲ್ಲಿ ನೋಡಬಹುದು.

**ವೇಷಭೂಷಣಗಳು :**

ಈ ಪ್ರದರ್ಶನಕ್ಕೆ ವೇಷಭೂಷಣಗಳು ಅಷ್ಟಾಗಿ ಕಂಡುಬರುವುದಿಲ್ಲ. ಕರಡಿಯ ಯಜಮಾನ ತಲೆಗೆ ರುಂಬಾಲು ಕಚ್ಚೆ ಪಂಚೆ, ಕೋಟು, ಕೈಯ್ಯಲ್ಲೊಂದು ಕೋಲು, ಮತ್ತೊಂದು ಕೈಗೆ ಕಬ್ಬಿಣದ ಬಳೆಗಳನ್ನು ತೊಡಿಸಿಕೊಂಡಿರುತ್ತಾನೆ. ಆಟವಾಡಿಸುವಾಗ ಇವುಗಳನ್ನು ಒಂದಕ್ಕೊಂದು ತಾಗುವಂತೆ ಕೈ ಅಲ್ಲಾಡಿಸುತ್ತಾನೆ. ಹೆಗಲ ಮೇಲೆ ಒಂದು ಜೋಳಿಗೆ ಹಾಕಿಕೊಂಡಿರುತ್ತಾನೆ.

**ಕಲಾಪ್ರದರ್ಶನ :**

ಈ ಪ್ರದರ್ಶನ ಕಲೆ ಪರಂಪರೆಯಿಂದ ಬಂದು ತನ್ನದೇ ಆದ ಪ್ರಾಮುಖ್ಯತೆಯನ್ನು ಗಳಿಸಿಕೊಂಡಿರುವ ಕರಡಿಯು ಬಹು ವಿರಳವಾಗಿ ಹಳ್ಳಿಗಳಿಗೆ ತನ್ನ ಆಟವನ್ನು ಪ್ರದರ್ಶಿಸಲು ಬರುತ್ತಾರೆ. ಸಾಮಾನ್ಯವಾಗಿ ವರ್ಷಕ್ಕೊಮ್ಮೆ ಬಂದು ಹಳ್ಳಿಗಳಲ್ಲಿ ಬೆಳಿಗ್ಗೆ ಆರಂಭಗೊಂಡು ಮಧ್ಯಾಹ್ನದ ವೇಳೆಗೆ ಮುಗಿಸುತ್ತಾರೆ. ಕರಡಿಯನ್ನು ಪ್ರತಿ ಮನೆಗಳ ಮುಂದೆ ಅದರ ಅಭಿಯನ ಮಾಡಿಸಿ ಭೀಕ್ಷೆಯನ್ನು ಸ್ವೀಕರಿಸುತ್ತಾರೆ. ಲಾಗಾ ಹಾಕುವುದು, ಬಳೆಯ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುವುದು ಸಲಾಂ ಹೊಡಿಸುವುದು ನಮಸ್ಕರಿಸುವುದು ಕರಡಿ ಗಂಡಾಗಿದ್ದರೆ ಅದು ಹೆಂಡತಿಯ ಮನೆಗೆ ಹೋಗುವ ರೀತಿ ಹೆಣ್ಣಾಗಿದ್ದರೆ ಅದು ತನ್ನ ಗಂಡನ ಮನೆಗೆ ಹೋಗುವಾಗ ಅಳುವ ಸನ್ನಿವೇಶ ಎಲ್ಲರನ್ನು ಬೆರಗುಗೊಳಿಸುತ್ತದೆ. ಗಂಡು ಮನೆಗೆ ಬಂದಾಗ ಹೆಂಡತಿ ಸಿಟ್ಟಿನಿಂದ ಮಲಗುವ ರೀತಿ ಹೀಗೆ ವಿವಿಧ ಬಗೆಯ ಕರಡಿಯಾಟವನ್ನು ನೋಡಬಹುದು. ಪ್ರದರ್ಶನದ ಸಮಯದಲ್ಲಿ ಕರಡಿಯ ಮೇಲೆ ಚಿಕ್ಕ ಮಕ್ಕಳನ್ನು ಕೂಡಿಸುತ್ತಾರೆ. ಹೀಗೆ ಮಾಡುವುದರಿಂದ ಮಕ್ಕಳು ಹೆದರುವುದಿಲ್ಲ ಎಂಬ ನಂಬಿಕೆ ಹಿಂದಿನಿಂದಲೂ ರೂಡಿಗತವಾಗಿದೆ. ತಾಯಿತಗಳನ್ನು ಹಣ ಕೊಟ್ಟವರಿಗೆ ಕೊಡುತ್ತಾರೆ. ಅವುಗಳನ್ನು ಮಕ್ಕಳ ಕೊರಳಲ್ಲಿ ಕಟ್ಟಿದರೆ ಮಕ್ಕಳು ಹೆದರುವುದಿಲ್ಲ ಎಂಬ ನಂಬಿಕೆ ಇದೆ. ಈ ರೀತಿಯಾಗಿ ಕರಡಿ ಕುಣಿತ ಪ್ರದರ್ಶನ ಪರಂಪರೆಯಿಂದ ಬಂದ ಪ್ರಸಂಗವಾಗಿದೆ.

**ಹಾವಾಡಿಗರು :**

ಪುರಾಣ ಪುಣ್ಯ ಕಥೆಗಳಲ್ಲಿ ಧಾರ್ಮಿಕ ವಲಯದಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿಕೊಂಡು ಬಂದಿರುವ ಸರ್ಪ (ಹಾವು) ಜನರಲ್ಲಿ ಭಯ ಭಕ್ತಿಯನ್ನು ಮೂಡಿಸಿದೆ. ತನ್ನ ಶಿಷ್ಟತನಕ್ಕೆ ಭಕ್ತಿಯನ್ನು ತನ್ನ ದುಷ್ಟತನಕ್ಕೆ, ಭಯವನ್ನು ಜನರಲ್ಲಿ ಮೂಡಿಸುವ ಸರ್ಪವು ಇಂದು ವಿಶ್ವವ್ಯಾಪ್ತಿ. ಇದರ ಆರಾಧನೆಯು ಪ್ರಚಲಿತದಲ್ಲಿದೆ. ಪುರಾಣಗಳಲ್ಲಿ ಇದು ಜನತೆಯ ಆರಾಧನೆ ದೈವಗಳಿಗೆ ಸಂಬಂಧಿಸಿದ ಕಥೆಗಳಲ್ಲಿ ಇದರ ಪಾತ್ರವು ತುಂಬ ವೈಶಿಷ್ಟ್ಯ ಪೂರ್ಣವಾಗಿ ಮೂಡಿ ಬಂದಿರುವುದನ್ನು ಕಾಣುತ್ತೇವೆ.

Scanned with OKEN Scanner

ವಿಷ್ಣುವಿಗೆ ಹಾಸಿಗೆಯಾಗಿ, ವಿಘ್ನೇಶ್ವರನ ಸೊಂಟದ ಪಟ್ಟಿಯಾಗಿ ಹೀಗೆ ದೈವಗಳ ಸಹಯೋಗವನ್ನು ಪಡೆಯುವುದರೊಂದಿಗೆ ತನ್ನ ಪ್ರಾಮುಖ್ಯತೆಯನ್ನು ಇದು ವೃದ್ಧಿಸಿಕೊಂಡಿದೆ.

ಹಾವುಗಳನ್ನು ವಿಶೇಷ ತಂತ್ರ ಬಳಸಿ ಹಿಡಿದು ಅವುಗಳ ಹಲ್ಲುಗಳನ್ನು ಕಿತ್ತಿ ಪಳಗಿಸಿ ವಿವಿಧ ಆಟಗಳಲ್ಲಿ ಪ್ರದರ್ಶಿಸಿ ಉಪಜೀವನವನ್ನು ನಡೆಸುವವರನ್ನು ಹಾವಾಡಿಗರೆಂದು ಕರೆಯಲಾಗುತ್ತದೆ. ಇವರು ಹಾವುಗಳ ಬಗೆಗಿನ ಜನರಲ್ಲಿರುವ ಭಯ ಭಕ್ತಿಗಳನ್ನೇ ಮೂಲ ಬಂಡವಾಳವನ್ನಾಗಿಸಿಕೊಂಡು ತಮ್ಮಲ್ಲಿನ ಹಾವುಗಳನ್ನು ಪ್ರದರ್ಶಿಸಿ ಜೀವನ ನಡೆಸುವರು. ಇವರು ಅಲೆಮಾರಿಗಳು. ಊರಿಂದ ಊರಿಗೆ ಸಂಚರಿಸುತ್ತಾ ತಮ್ಮಲ್ಲಿ ಪಳಗಿದ ಹಾವುಗಳನ್ನು ಮತ್ತು ಮುಂಗಸಿಗಳಿಗೆ ಜಗಳಕ್ಕೆ ಹಚ್ಚಿ ಪ್ರದರ್ಶನ ನೀಡುವುದರೊಂದಿಗೆ ವಿವಿಧ ಜಾತಿಯ ಹಾವುಗಳನ್ನು ಪ್ರದರ್ಶಿಸುತ್ತಾ ಅವುಗಳು ತಮ್ಮ ಆಹಾರವನ್ನು ಹುಡುಕಿಕೊಂಡು ಬೇಟೆಯಾಡುವ ಬಗೆ, ವಾಸಿಸುವ ಸ್ಥಳಗಳು, ಕಚ್ಚುವ ಸಂದರ್ಭ, ಮೊದಲಾದ ವಿಷಯಗಳನ್ನು ಸಾಧ್ಯಂತವಾಗಿ ವಿವರಿಸಿ ತಮ್ಮ ಕೈ ಚಳಕದ ವಿವಿಧ ಜಾಲದ ಆಟಗಳನ್ನು ಪ್ರದರ್ಶಿಸಿ ಹಾವು ಕಚ್ಚಿದಾಗ ಔಷದೋಪಚಾರಕ್ಕೆಂದು ಬಳಸುವ ಗಿಡದ ಬೇರು, ಹಾವುಗಳತ್ತಿರ ಸುಳಿಯದಿರಲೆಂದು ಸ್ವಪ್ನಗಳಲ್ಲಿ ಕಾಣಿಸದೇ ಇರಲೆಂದು ಹಲವು ಬಗೆಯ ಅಪಶಕುನಗಳ ನಿವಾರಣೆಗಾಗಿ ತಾವು ತಯಾರಿಸಿದ 'ತಾಯಿತಗಳ'ನ್ನು ನೀಡಿ ಹಣ ಪಡೆದು ಸಂಗ್ರಹಿಸಿಕೊಂಡು ಜೀವನ ನಡೆಸುತ್ತಾ ಊರುರು ಅಲೆಯುತ್ತಿರುತ್ತಾರೆ. ವಿಜಯ ನಗರ ಸಾಮ್ರಾಜ್ಯದ ದೇವಾಲಯಗಳಲ್ಲಿ ಹಾವಾಡಿಗರ ಚಿತ್ರಗಳನ್ನು ಕೆತ್ತಲಾಗಿದೆ. ಇವು ಪರಂಪರೆಯಿಂದ ಈ ಕಲೆ ಈ ಪ್ರದರ್ಶನಗಳಲ್ಲಿ ಪ್ರಚಲಿತದಲ್ಲಿತ್ತು ಎಂಬುದಕ್ಕೆ ಆ ಸ್ಮಾರಕಗಳೇ ಸಾಕ್ಷಿಗಳಾಗಿವೆ. ಇಂದಿಗೂ ಸಹ ಇವರ ನಗರ ಪಟ್ಟಣ ಜಾತ್ರೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುತ್ತಾರೆ.

**ಕಲಾಪ್ರದರ್ಶನ :**


ಜನಪದರಲ್ಲಿನ ವಿಷ ಜಂತುಗಳ ಪಳಗಿಸುವ ಭಯವನ್ನೇ ಮೂಲ ದ್ರವ್ಯವನ್ನಾಗಿಸಿಕೊಂಡು ಕಲಾ ಪ್ರದರ್ಶನ ನೀಡಿ ಜೀವನೋಪಾಯವನ್ನು ಕಂಡುಕೊಂಡಿರುವ ಈ ಹಾವಾಡಿಗರು ಹೆಚ್ಚಾಗಿ ಮುಸ್ಲಿಂ ಜನಾಂಗಕ್ಕೆ ಸೇರಿದವರು. ಇವರು ಹಳ್ಳಿ ಮತ್ತು ಪಟ್ಟಣ ಪ್ರದೇಶಗಳಲ್ಲಿಯೂ ತಮ್ಮ ಆಟದ ಪ್ರದರ್ಶನ ಮಾಡುತ್ತಾರೆ. ವಿಶಾಲವಾದ ಬೀದಿಯಲ್ಲಿ ಇರುವ ಮೊದಲಿಗೆ ಹಾವುಗಳ ಬುಟ್ಟಿಗಳೊಂದಿಗೆ ತಮ್ಮ ಪರಿಕರಗಳನ್ನು ಇಟ್ಟು ಪುಂಗಿಯನ್ನು ಊದುತ್ತಾ, ಡೋಲನ್ನು ಬಾರಿಸುತ್ತಾ, ಇದರಿಂದ ಜನರು ಅಲ್ಲಿ ಗುಂಪು ಕೂಡುತ್ತಾರೆ. ಬಹು ಸಂಖ್ಯೆಯಲ್ಲಿ ಜನ ಕೂಡಿದ ನಂತರ ಕಲಾ ಪ್ರದರ್ಶನ ಜರಗುತ್ತದೆ. ಹಾವಾಡಿಗ ಕಲಾವಿದರು ಸಾಮಾನ್ಯವಾಗಿ ಇಬ್ಬರು ಅಥವಾ ಮೂವರು ಇರುತ್ತಾರೆ. ಹಾವುಗಳ ಯಜಮಾನನಿಗೆ ಸಹಾಯಕನಾಗಿರುವವನು ಡೋಲು ನುಡಿಸುತ್ತಾ ಯಜಮಾನ ಮಾತುಗಳನ್ನು ಹಿಂಬನ್ನು ಕೊಡುತ್ತಿರುತ್ತಾನೆ. ಅವರಿಬ್ಬರಲ್ಲಿ ಪೂರ್ವ ನಿಯೋಜಿತ ನಾಟಿಕೀಯ ಸಂಭಾಷಣೆಯು ಜರಗುತ್ತದೆ. ಇಲ್ಲಿ ಡೋಲು,

ಕೊಳಲು, ಡಮರುಗ, ಪುಂಗಿ, ವಾದ್ಯಗಳು ಬಳಕೆಯಾಗುತ್ತವೆ. ಇವರ ವೇಷ ಭೂಷಣ ಸಾಮಾನ್ಯವಾಗಿರುತ್ತವೆ. ಆಟದ ಯಜಮಾನರು ಪುಂಗಿ ಕೊಳಲು, ಡಮರುಗವನ್ನು ಬಳಸಿದರೆ, ಸಹಾಯಕನು ಡೋಲು ನುಡಿಸುತ್ತಿರುತ್ತಾನೆ. ಹಿರಿಯ ಕಲಾವಿದ ಢಮರುಗವನ್ನು ನುಡಿಸಿ ಕೊಳಲನ್ನು ಊದುತ್ತಾ ಒಂದೊಂದೇ ಹಾವು ಬುಟ್ಟಿಯಿಂದ ಹೊರ ತೆಗೆದು ತೋರಿಸುತ್ತಾ ಅದರ ಗುಣಾವಗುಣಗಳನ್ನು ವರ್ಣಿಸುತ್ತಾ, ಅದು ಕೆರಳಿದಾಗ ವರ್ತಿಸುವ ಬಗೆಯನ್ನು ಹಾವನ್ನು ಬಳಸಿಕೊಂಡು ತೋರಿಸುತ್ತಾನೆ. ಆಗ ನೆರೆದ ಜನರಿಗೆ ಎಲ್ಲಾ ಹಾವುಗಲ ಬಗ್ಗೆ ವಿವರಿಸಿ ಹೇಳುತ್ತಾನೆ. ಇಷ್ಟೇಲ್ಲಿ ಹಾವುಗಳ ಆಟ ಮುಗಿದ ನಂತರ ಜಾದು ಆಟವು ಆರಂಭಗೊಳ್ಳುತ್ತದೆ. ತನ್ನಲ್ಲಿನ ಒಂದು ಬಗೆಯ ಉಗ್ರದೇವತೆ ಮುಖವುಳ್ಳ ಬಟ್ಟೆಯಿಂದ ತಯಾರಿಸಿ ಅದಕ್ಕೆ ಎರಡು ಬಣ್ಣ ಯೆಲಬುಗಳನ್ನು ದೇವರ ಪೋಟೋಗಳನ್ನು ಒಂದು ಬಟ್ಟೆಯನ್ನಾಸಿ ಅದರ ಮೇಲಿಟ್ಟಿರುತ್ತಾರೆ. ಅವುಗಲ ಸಮ್ಮುಖದಲ್ಲಿಯೇ ಈ ಜಾದು ಆಟವು ಆರಂಭಗೊಳ್ಳುತ್ತದೆ. ಈ ಆಟದಲ್ಲಿ ಹಿಂದಿ ಭಾಷೆಯು ಪ್ರಧಾನವಾದರೂ ಅಷ್ಟಿಷ್ಟು ಜನರಿಗೆ ತಿಳಿಯಲೆಂದು ಕನ್ನಡವು ಬಳಕೆಯಾಗುತ್ತದೆ. ಜಾದುವಿನಲ್ಲಿ ಕಲ್ಲು ತೆಗೆದುಕೊಂಡು ನಾಣ್ಯ ಮಾಡಿ ತೋರಿಸುವುದಲ್ಲದೆ ಎಲೆಗಳಿಂದ ರೂಪಾಯಿ ನಾಣ್ಯವನ್ನು ಮಾಡಿತೋರಿಸುತ್ತಾರೆ. ಕೊನೆಯಲ್ಲಿ ನೆರೆದಂತಹ ಜನರ ಕಡೆ ಹಣವನ್ನು ಸಂಗ್ರಹಿಸುತ್ತಾರೆ. ಹೀಗೆ ಜನರನ್ನು ವಿವಿಧ ಬಗೆಯಲ್ಲಿ ಕುತುಹಲಕ್ಕೀಡುಮಾಡುವ ಅವರಲ್ಲಿನ ಭಯ ಭೀತಿಯನ್ನು ಹುಟ್ಟಿಸಿ ಚಮತ್ಕಾರಿಯುತವಾದ ಮಾತುಗಳಿಂದ ಬಹು ಜಾಣತನದಿಂದ ತನ್ನಲ್ಲಿನ ಪ್ರಾಣಿ ಸಂವಹನ ಪ್ರದರ್ಶನಗಳಾದ ಕವಲೆತ್ತಿನವರು, ಕರಡಿಕುಣಿತ, ಹಾವಾಡಿಗರು ಮುಂತಾದವರು ಪ್ರದರ್ಶನ ಪರಂಪರೆಯಿಂದ ಮುಂದುವರೆಸಿಕೊಂಡು ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಕಾಣುತ್ತೇವೆ.

**ಆಕಾರ ಗ್ರಂಥಗಳು :–**


1) ಎಂ.ಎಸ್. ಸುಂಕಾಪೂರ – ಜಾನಪದ ಸಾಹಿತ್ಯ
2) ಕೆ.ಆರ್. ದುರ್ಗಾದಾಸ – ಜಾನಪದ ಬೈಲಾಟ
3) ಡಾ. ತಿಪ್ಪೇಸ್ವಾಮಿ ಡಿ.ಎಸ್. – ಬಳ್ಳಾರಿ ಜಿಲ್ಲೆಯ ಜನಪದ ಗೀತೆಗಳು
4) ರಾಜಶೇಖರ ನಗಳೂರು – ಬಳ್ಳಾರಿ ಜಿಲ್ಲೆಯ ಪ್ರದರ್ಶನ ಕಲೆಗಳು


■



ISBN-978-93-5396-161-9

Mallikarjun Graphics, Hnd 9945196601

Scanned with OKEN Scanner